# “ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ”

◆ ಕೆ.ಪಿ.ಶುಭದತ್, ಮೈಸೂರು

“ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ”- ಭಕ್ತಿ ಭಂಡಾರಿ ಬಸವಣ್ಣನವರು ತಮ್ಮ ಒಂದು ವಚನದಲ್ಲಿ, ಬಹುವಾಗಿ ನೊಂದು ತಮಗೆ ತಾವೇ ಹೇಳಿಕೊಂಡಂತೆ, ಇದೆ ಈ ಮಾತು. ಆದರೆ ನಿಜದಲ್ಲಿ ಅವರಿಗೆ ಇದು ಅನ್ವಯವಾಗುವಂತಹುದಲ್ಲ. ಲೋಕದಲ್ಲಿ ಸಾಮಾನ್ಯವಾಗಿ ಪ್ರಾಪಂಚಿಕತೆಯಲ್ಲಿಯೇ ಪೂರ್ತಿ ಮುಳುಗಿದವರಿಗೆ ಅನ್ವಯವಾಗುತ್ತದೆ. ಬಹುತೇಕ ಜನರು ಲೌಕಿಕ ಜಂಜಡದಲ್ಲೇ ಸದಾ ಮುಳುಗಿರುತ್ತಾರೆ. ತಮ್ಮ ಭೌತಿಕ ಸುಖ-ಸೌಕರ್ಯಗಳಿಗಾಗಿ ದುಡಿಯುತ್ತ ಏನೆಲ್ಲ ಕಷ್ಟಪಡುತ್ತಾರೆ! ದುಡಿದು ಹಣ ಸಂಪಾದನೆ ಮಾಡುವುದಕ್ಕಾಗಿ ತಮ್ಮ ಎಲ್ಲ ವೇಳೆಯನ್ನೂ ವಿನಿಯೋಗಿಸುತ್ತಾರೆ. ವಾಸ್ತವವಾಗಿ ನಾವೆಲ್ಲರೂ ಹಾಗೆಯೇ! ಬೆಳಗಿನಿಂದ ರಾತ್ರಿ ಮಲಗುವವರೆಗೂ ಹಣದ ಚಿಂತೆಯಲ್ಲೇ ಇರುವ ನಮಗೆ ದೇವರು, ಪೂಜೆ, ಪ್ರಾರ್ಥನೆಗಳಿಗೆ ಸಮಯವೇ ಸಿಕ್ಕುವುದಿಲ್ಲ. ಭೌತವಾದವನ್ನೇ ಪ್ರತಿಪಾದಿಸುವವರಿಗೆ ದೇವರು, ಧರ್ಮ ಎಂಬುದೆಲ್ಲ ಮೂಢನಂಬಿಕೆ; ಪುರೋಹಿತರು ಮುಗ್ಧ ಜನರನ್ನು ಮೋಸಗೊಳಿಸಿ ಶೋಷಣೆ ಮಾಡಲು ಹೂಡಿದ ತಂತ್ರ; ಕಲ್ಪನೆಯ ಕಟ್ಟುಕತೆ. ದೇವರು, ಧರ್ಮ ಎಂಬ ನಂಬಿಕೆ ಉಳ್ಳವರೂ ಸಹ ಪೂಜೆ ಪ್ರಾರ್ಥನೆಗಳನ್ನು ಕಾಟಾಚಾರಕ್ಕೋ, ಶಾಸ್ತ್ರವಿಧಿ ಎಂದೋ ಮಾಡಿ ಹೆಚ್ಚು ಕಾಲವನ್ನು ‘ಕಾಂಚನ’ ಸಂಪಾದನೆಯಲ್ಲೇ ಕಳೆಯುತ್ತಾರೆ. ಇದು ವಾಸ್ತವವೆ.

ಮನುಷ್ಯನ ಮೂಲಭೂತ ಅಗತ್ಯಗಳೆಂದರೆ ಆಹಾರ, ಬಟ್ಟೆ ಮತ್ತು ಮನೆ. ಆಹಾರವಿಲ್ಲದೆ ಜೀವಿಸಲು, ಆರೋಗ್ಯವಾಗಿರಲು, ಶಕ್ತಿ ಪಡೆಯಲು ಸಾಧ್ಯವಿಲ್ಲ. ರಕ್ಷಣೆಗೆ, ಮರ್ಯಾದೆಗೆ, ಬಟ್ಟೆ ಬೇಕು. ತನ್ನಷ್ಟಕ್ಕೆ ತಾನು ಸಂಸಾರದೊಂದಿಗೆ ನೆಮ್ಮದಿಯಾಗಿ ಪ್ರಕೃತಿಯ ವಿಕೋಪಗಳಿಂದ ಸುರಕ್ಷಿತವಾಗಿರಲು ಮನೆ ಇರಬೇಕು. ಈ ಮೂರು ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಹಣ ಬೇಕು. ಈ ಪ್ರಾಥಮಿಕ ಅಗತ್ಯಗಳನ್ನು ಪೂರೈಸಿಕೊಂಡ ಮೇಲೆ ಇನ್ನೆರಡು ಬೇಡಿಕೆಗಳ ಕಡೆ ನಮ್ಮ ಗಮನ ಹರಿಯುವುದನ್ನು ಅರ್ಥಶಾಸ್ತ್ರಜ್ಞರು ಗುರುತಿಸಿದ್ದಾರೆ, ಮಾನ್ಯ ಮಾಡಿದ್ದಾರೆ. ಜೀವನದ ಸೌಕರ್ಯಗಳು ದೊರಕಿದ ಮೇಲೆ ವಿಲಾಸದ ಭೋಗವಸ್ತುಗಳ ಕಡೆ ಮಾನವನು ಆಸಕ್ತಿ ತೋರುತ್ತಾನೆ. ಹೆಚ್ಚು ಹೆಚ್ಚು ಸೌಕರ್ಯಗಳನ್ನು ಬಯಸಿದಾಗ ಎಷ್ಟು ಹಣ ಸಂಪಾದಿಸಿದರೂ ಸಾಕಾಗುವುದಿಲ್ಲ. ಸದಾ ಹಣದ ಹಿಂದೆ ಓಡಬೇಕಾಗುತ್ತದೆ. ಆಗ ಬಯಕೆಗಳ ದಾಸರಾಗಿ ಹಣ ಸಂಪಾದನೆಯೊಂದೇ ಜೀವನದ ಗುರಿಯಾಗುತ್ತದೆ. ಆಗ ‘ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆ ಇಲ್ಲ’ ಎನ್ನುವಂತಾಗುತ್ತದೆ. ಅಣ್ಣನವರ ಮಾತು ನೆನಪಾಗುತ್ತದೆ.

ಹಾಗೆಂದು ಅಣ್ಣನೇ ಆಗಲಿ, ಶರಣರಾಗಲಿ, ಹಣ ಸಂಪಾದನೆ ಮಾಡುವುದಕ್ಕೆ ವಿರೋಧಿಗಳಲ್ಲ. ಅವರು ಪ್ರಾಪಂಚಿಕ ಜೀವನವನ್ನು ನಿರಾಕರಿಸುವುದಿಲ್ಲ. ದಿನವಿಡೀ ಹಣಗಳಿಕೆಯಲ್ಲೇ ಮುಳುಗಿ ಆತ್ಮಸಾಧನೆಗೆ ಸಮಯವಿಲ್ಲ ಎನ್ನುವುದನ್ನು ಮಾತ್ರ ಒಪ್ಪುವುದಿಲ್ಲ. ಹೆಣ್ಣು-ಹೊನ್ನು-ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಎನ್ನುತ್ತಾರೆ. ಶರಣರು ‘ಕಾಯಕವೇ ಕೈಲಾಸ’ ಎಂದು ಕಾಯಕ ತತ್ತ್ವವನ್ನು ಎತ್ತಿ ಹಿಡಿಯುತ್ತಾರೆ. ಕಾಯಕ ಎಂದರೆ ಬರಿ ಕೆಲಸವಲ್ಲ. ಹಣ ಸಂಪಾದನೆಯೊಂದೇ ಅದರ ಗುರಿ ಅಲ್ಲ. ಮರ್ಯಾದೆಯಿಂದ ಕೂಡಿದ ಸ್ವಾವಲಂಬಿ ಜೀವನವನ್ನು ನಡೆಸಲು ಎಷ್ಟು ಬೇಕೋ ಅಷ್ಟು ಹಣವನ್ನು ಮಾತ್ರ ಇಟ್ಟುಕೊಂಡು ಸಂಪಾದನೆಯ ಮಿಕ್ಕ ಹಣವನ್ನು ದಾಸೋಹಕ್ಕೆ ವಿನಿಯೋಗಿಸಬೇಕು. ದಾಸೋಹ ಎಂದರೆ ಇತರ ಭಕ್ತರೊಡನೆ ಹಂಚಿಕೊಳ್ಳುವುದು. ಜಂಗಮ ದಾಸೋಹವೂ ಉಂಟು. ಕಾಯಕದ ಗುರಿಯೇ ದಾಸೋಹ ಎಂದರೂ ತಪ್ಪಲ್ಲ. ಕಾಯಕ ಸತ್ಯ ಶುದ್ಧವಾಗಿರಬೇಕು. ಅಂದರೆ ಪ್ರಾಮಾಣಿಕವಾಗಿ ದೇಹಶ್ರಮ ಇಲ್ಲವೆ ಬುದ್ಧಿಶ್ರಮದಿಂದ ಸಂಪಾದನೆ ಮಾಡಿದ್ದಾಗಿರಬೇಕು. ಅಸತ್ಯದಿಂದ, ಮೋಸದಿಂದ ಶೋಷಣೆ ಮಾಡಿ ಸಂಪಾದಿಸುವುದು ಕಾಯಕವಾಗುವುದಿಲ್ಲ.

ಅಣ್ಣನವರು, ಶರಣರು, ಕಾಂಚನಕ್ಕೆ ವೇಳೆಯಿರಿಸಿಕೊಳ್ಳುವಂತೆ ಲಿಂಗಕ್ಕೂ ವೇಳೆಯಿರಿಸಿಕೊಳ್ಳಬೇಕು ಎಂಬ ದೃಷ್ಟಿಯುಳ್ಳವರು. ‘ಲಿಂಗ’ ಎನ್ನುವುದು ಆತ್ಮವಿಕಾಸಕ್ಕೆ, ಜಂಗಮ (ಜೀವ-ಶಿವ) ಸೇವೆಗೆ ಸಂಕೇತ. ಇಷ್ಟಲಿಂಗ ಪೂಜೆಯಿಂದ (ಅಂದರೆ ಇಷ್ಟದೈವ ಪೂಜೆಯಿಂದ) ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿ ಮಾಡುವ ಪ್ರಾರ್ಥನೆ-ಸೇವೆಯವರೆಗೂ ಅದರ ಅರ್ಥ ವಿಸ್ತಾರವಾಗುತ್ತದೆ. ಶರಣರು ಆರ್ಥಿಕ ಮತ್ತು ಪಾರಮಾರ್ಥಿಕ ಎರಡನ್ನೂ ಸಮನ್ವಯಗೊಳಿಸುತ್ತಾರೆ. ನಮ್ಮ ಭಾರತ ದೇಶಕ್ಕೆ ಅಗತ್ಯವಾದುದೂ ಈ ಎರಡರ ಸಮನ್ವಯದಿಂದ ಸಾಧಿಸಬೇಕಾದ ಏಳಿಗೆ. ಆದರೆ ಭಾರತದಲ್ಲಿ ಇಂದು ಸಮನ್ವಯದ



ಲೇಖಕರು ಮೈಸೂರಿನ ಆಡಿಟ್ ಸಂಸ್ಥೆಯೊಂದರಲ್ಲಿ ಲೆಕ್ಕಪತ್ರಗಳ ಪರಿಶೋಧಕರಾಗಿದ್ದಾರೆ. ಅನೇಕ ವರ್ಷಗಳಿಂದ ಆಶ್ರಮದ ಭಕ್ತರಾಗಿದ್ದಾರೆ. ಇಂದಿನ ಮೌಲ್ಯಗಳಲ್ಲಿ ಕಂಡುಬರುತ್ತಿರುವ ಪಲ್ಲಟವನ್ನು ಕುರಿತು ಇಲ್ಲಿ ವಿಶ್ಲೇಷಿಸಿದ್ದಾರೆ.

ಮಾತಿರಲಿ. ಆರ್ಥಿಕ–ಪಾರಮಾರ್ಥಿಕ ಇವೆರಡು ಪರಸ್ಪರ ವಿರುದ್ಧ ಎಂಬ ತಪ್ಪು ತಿಳುವಳಿಕೆಯಲ್ಲಿ ಆರ್ಥಿಕ ಅಭಿವೃದ್ಧಿಗೆ ಅತಿಯಾದ ಪ್ರಾಶಸ್ತ್ಯ ದೊರೆತು ಜೀವನ ಮೌಲ್ಯಗಳು ಏರುಪೇರಾಗಿವೆ.

ಜನಸಂಖ್ಯಾಬಾಹುಳ್ಯದಲ್ಲಿ ನಮ್ಮ ದೇಶ ಜಗತ್ತಿಗೆ ಎರಡನೆಯ ಸ್ಥಾನದಲ್ಲಿದೆ. ಜನಸಂಖ್ಯೆಯ ಏರಿಕೆಯ ವೇಗ ಅಂಕೆ ಮೀರಿದೆ. ಕಳೆದ ದಶಕದಲ್ಲಿ ದೇಶದ ಜನಸಂಖ್ಯೆ ಎಂಟು ಕೋಟಿ ಹೆಚ್ಚಾಗಿದೆ. ಈಗ ಒಟ್ಟು ಜನಸಂಖ್ಯೆ ೧೦೭ ಕೋಟಿ ದಾಟಿದೆ. ಭಾರತದ ಇತ್ತೀಚಿನ ಆರ್ಥಿಕ ಸಮೀಕ್ಷೆ ಒದಗಿಸಿರುವ ಅಂಕಿ–ಅಂಶಗಳ ಪ್ರಕಾರ ದೇಶದ ಉತ್ಪಾದನೆ, ಸಂಪತ್ತು, ಆರ್ಥಿಕ ಪರಿಸ್ಥಿತಿ ಅಷ್ಟೇನೂ ಚೆನ್ನಾಗಿಲ್ಲ. ದಿಟ್ಟ ಆರ್ಥಿಕ ಸುಧಾರಣೆಗಳ ಸಾಹಸಕ್ಕೆ ಕೈಹಾಕಿಯೂ ಸ್ಥಿತಿ ಇನ್ನೂ ಒಂದು ಧನಾತ್ಮಕ ಸ್ಥಿರತೆಗೆ ಬಂದಿಲ್ಲ, ಸುಭದ್ರವಾಗಿಲ್ಲ, ದೇಶೀಯ ಉದ್ಯಮಗಳಿಗೆ ಉತ್ತೇಜನಕಾರಿಯಾಗಿಲ್ಲ. ವಿಜ್ಞಾನ–ತಂತ್ರಜ್ಞಾನಗಳಲ್ಲಿ ಒಳ್ಳೆಯ ಬೆಳವಣಿಗೆ ಕಂಡರೂ ತಲಾ ವರಮಾನ ಏರಿ, ಹಣದುಬ್ಬರ ಇಳಿದರೂ, ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ೩–೪ ವರ್ಷಗಳಿಂದ ಹಿನ್ನಡೆಯೇ ಕಾಣುತ್ತಿದೆ. ಏಕೆ ಹೀಗೆ?

ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳಿಗೇನೂ ನಮ್ಮಲ್ಲಿ ಕೊರತೆ ಇಲ್ಲ. ಅವುಗಳನ್ನು ದುಂದು ಮಾಡಿ ಹಾಳುಮಾಡದೆ ಅವುಗಳಿಂದ ಗರಿಷ್ಠ ಪ್ರಯೋಜನವನ್ನು ಪಡೆಯುವುದು ಹೇಗೆ ಎಂಬುದರ ಬಗ್ಗೆ ಗಂಭೀರವಾದ ಚಿಂತನೆ ಮಾಡಬೇಕಾಗಿದೆ. ಚಿಂತನಶೀಲರ ಸದಾಶಯಗಳನ್ನೂ ಯೋಜನೆಗಳನ್ನೂ ಜನಹಿತ ದೃಷ್ಟಿಯಿಂದ ಕಾರ್ಯಗತ ಮಾಡುವ ಪ್ರಬಲವಾದ ರಾಜಕೀಯ ಇಚ್ಛೆಯ ಅಗತ್ಯ ಬಹಳ ಇದೆ.

ಇದೆಲ್ಲಕ್ಕೂ ಮುಖ್ಯವಾದುದು ಮತ್ತು ಮೂಲಭೂತವಾದುದು ಮುಂದಾಳುಗಳ ಮತ್ತು ದುಡಿಯುವ ವಯಸ್ಸಿನವರ ಮನೋಧರ್ಮ. ಅದು ಧನಾತ್ಮಕವಾಗಿರಬೇಕು. ಸ್ವಾರ್ಥಪರವಾಗಿರದೆ ಜನಪರವಾಗಿರಬೇಕು. ಶಕ್ತಿ, ಉತ್ಸಾಹ, ಆರೋಗ್ಯ ತುಂಬಿರುವ ಯುವಕರಲ್ಲಿ ಉತ್ಕಟವಾದ ದೇಶಪ್ರೇಮ, ಸದ್ಭಾವನೆಗಳಿರಬೇಕು. ವೈಯಕ್ತಿಕ ಲಾಭ, ಸುಖ ಸೌಕರ್ಯಗಳಿಗೆಂದು ತೋರುವ ಆಸಕ್ತಿ, ಕಾರ್ಯಕ್ಷಮತೆಗಳನ್ನು ಎಲ್ಲರ ಸುಖಕ್ಕೆ, ಹಿತಕ್ಕೆ ಕಾರ್ಯಮಾಡುವುದರಲ್ಲೂ ತೋರಬೇಕು. ನಮ್ಮ ಮನೋಧರ್ಮದಲ್ಲಿ ಮಹತ್ತರ ಬದಲಾವಣೆಯಾಗಬೇಕು. ಅಂದರೆ ಯುವಕರು ಕ್ರಿಯಾಶೀಲರಾಗಬೇಕು. ಉದ್ಯೋಗದಲ್ಲಿ ಸರ್ಕಾರಿ ಹುದ್ದೆಗಳಿಗೇ ಜೋತುಬೀಳದೆ ಸ್ವಾವಲಂಬಿಗಳಾಗಿ ಉತ್ಪಾದನಾಶೀಲರಾಗಬೇಕು.

ಇದಕ್ಕೆ ಸರ್ಕಾರ ಹಾಗೂ ಶ್ರೀಮಂತ ಬಂಡವಾಳದಾರರು ಪ್ರೋತ್ಸಾಹ ಮತ್ತು ನೆರವು ನೀಡಲು ಮುಂದಾಗಬೇಕು. ನಮ್ಮ ದೇಶದಲ್ಲಿಂದು ನಿರುದ್ಯೋಗ ಸಮಸ್ಯೆ ಬಹಳವಾಗಿದೆ. ಐದಾರು ವರ್ಷಗಳಿಂದ ಉದ್ಯೋಗಾವಕಾಶಗಳು ಕೊಂಚ ಹೆಚ್ಚಾಗಿದ್ದರೂ ಅಷ್ಟೇನೂ ಗಣನೀಯವಾಗಿಲ್ಲ. ಕೇವಲ ಅವಕಾಶ ಒದಗಿಸುವುದಷ್ಟೇ ಮುಖ್ಯವಲ್ಲ. ಎಲ್ಲಾ ಕ್ಷೇತ್ರಗಳಲ್ಲೂ ಸರಿಯಾದ ಶಿಕ್ಷಣ–ತರಬೇತಿ ಕಲ್ಪಿಸಿ ಕಾರ್ಯದ ಗುಣಮಟ್ಟ ಉತ್ತಮವಾಗುವಂತೆ ಯೋಜಿಸಬೇಕು.

ಹೀಗೆ ಸಹಕಾರ ಮತ್ತು ಕಾರ್ಯಶ್ರದ್ಧೆಗಳಿಂದ ಕೂಡಿದ ಸಮಷ್ಟಿ ಪ್ರಯತ್ನ ಮಾಡುವ ಮನೋಧರ್ಮ ಸಮಾಜದಲ್ಲಿ ಬೆಳೆಯಬೇಕು. ಜೊತೆಗೆ ಅಗತ್ಯವಾದ ಶಿಸ್ತು, ಕಾರ್ಯವಿಧಾನ ಕ್ರಮಬದ್ಧತೆ ಇದ್ದಲ್ಲಿ ಕಾಯಕಧರ್ಮ (work culture) ಉತ್ಕೃಷ್ಟವಾಗುತ್ತದೆ. ಆದುದರಿಂದ ಮೊದಲು ನಮ್ಮ ಮನೋಧರ್ಮ ಬದಲಾಗಬೇಕು.

ಆದರೆ ಭಾರತದ ವಸ್ತುಸ್ಥಿತಿ ಚಿಂತೆಗೆ ಕಾರಣವಾಗಿದೆ. ದೇಶದ ಬಗ್ಗೆ, ಸಹಭಾರತೀಯರ ಬಗ್ಗೆ, ದೇವರು ನೀತಿ ಧರ್ಮಗಳ ಬಗ್ಗೆ ನಮ್ಮ ಮನೋಧರ್ಮ ಸರಿಯಾಗಿಲ್ಲ. ದೇಶದ ಬಗ್ಗೆ ಪ್ರೇಮ–ಅಭಿಮಾನಗಳಾಗಲಿ, ದೇಶವಾಸಿಗಳ ಬಗ್ಗೆ ಕಾಳಜಿಯಾಗಲಿ ಶೇಕಡ ಐವತ್ತರಷ್ಟು ಜನರಲ್ಲಿ ಇಲ್ಲ. ಬದಲು ತಮ್ಮ ತಮ್ಮ ಪ್ರದೇಶದ, ಭಾಷೆಯ, ಕೋಮಿನ ಹಿತಾಸಕ್ತಿಗಳ ಹೆಸರಿನಲ್ಲಿ ಸ್ವಾರ್ಥಸಾಧನೆಯೇ, ವೈಯಕ್ತಿಕ ಇಲ್ಲವೇ ಕೌಟುಂಬಿಕ ಏಳ್ಗೆಗಳೇ ಮೂಲ ಉದ್ದೇಶಗಳಾಗಿಬಿಟ್ಟಿವೆ. ನೀತಿ ಮೌಲ್ಯಗಳ ಅಧಃಪತನ ಎದ್ದು ಕಾಣುತ್ತಿದೆ. ಮಾನವೀಯ ಮೌಲ್ಯಗಳೇ ಕಾಣದಾಗಿವೆ. ದ್ವೇಷ, ಅಸೂಯೆ, ಅನರ್ಥ ಪೈಪೋಟಿ, ಹಿಂಸೆ, ಕ್ರೌರ್ಯ, ಕಾನೂನುಬಾಹಿರ ಚಟುವಟಿಕೆಗಳಿಂದಾಗಿ ರಾಷ್ಟ್ರದ ಸಮಗ್ರತೆಗೆ, ಐಕ್ಯತೆಗೆ, ಸುರಕ್ಷತೆಗೆ ಧಕ್ಕೆಯುಂಟಾಗಿದೆ. ವಿದ್ಯಾವಂತರೆನಿಸಿಕೊಂಡವರೇ ಶೀಲಚಾರಿತ್ರ್ಯಗಳನ್ನು ಬೆಳೆಸಿಕೊಳ್ಳದೆ ತೋರಿಕೆಯ ಮುಖವಾಡಗಳನ್ನು ಹಾಕಿಕೊಂಡು ಅಮಾಯಕರನ್ನು ಮೋಸಗೊಳಿಸುವುದು ಸಾಮಾನ್ಯವಾಗಿದೆ. ಭ್ರಷ್ಟಾಚಾರವೇ ಅಂಗೀಕೃತ ಜೀವನಕ್ರಮವಾಗಿ ವಿದ್ಯಾಬುದ್ಧಿಗಳ ದುರುಪಯೋಗ ಎಲ್ಲ ಕ್ಷೇತ್ರಗಳಲ್ಲೂ ಕಂಡುಬರುತ್ತಿವೆ.

ಇಂಥ ಸನ್ನಿವೇಶದಲ್ಲೂ ಕೆಲವು ಯುವಕರಾದರೂ ಹತಾಶರಾಗದೆ ಧೃತಿಗೆಡದೆ ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳಿಂದ ಶಕ್ತಿ, ಸ್ಫೂರ್ತಿಗಳನ್ನು ಪಡೆದು ಉಜ್ವಲ ರಾಷ್ಟ್ರಪ್ರೇಮಿಗಳಾಗಿ ಮುಂದಾಳುಗಳಾಗಿಯೊ ಸೇವಕರಾಗಿಯೊ ಸಮಗ್ರ ಭಾರತದ ಹಿತಸಾಧನೆಗಾಗಿ ಕಾರ್ಯೋನ್ಮುಖರಾಗಬೇಕು. ಸ್ವಾಮಿಜಿ ಭವಿಷ್ಯ ಭಾರತದ ದರ್ಶನವನ್ನು ಯುವಜನರ ಮುಂದಿಟ್ಟಿರುವುದನ್ನು ಗಮನಿಸಿದರೆ ಭರವಸೆಯುಂಟಾಗುತ್ತದೆ. ಆಗ '**ಕಾಂಚನವೆಂಬ ನಾಯ ನೆಚ್ಚಿ ನಿಮ್ಮ ನಾ ಮರೆದೆನಯ್ಯ. ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ**' ಎಂಬ ಕೊರಗು ಬಾಧಿಸುವುದಿಲ್ಲ. ಲಿಂಗಕ್ಕೆ ವೇಳೆ ಎಂಬ ಮಾತಿನ ಅರ್ಥ ವಿಸ್ತರಣೆಯನ್ನು ಮತ್ತೆ ನೆನಪಿಸಿಕೊಳ್ಳುವುದು ವಿಹಿತ. ಅದು ವೈಯಕ್ತಿಕ ಆತ್ಮವಿಕಾಸವೂ ಆಗುತ್ತದೆ – ಜೀವಶಿವಸೇವೆಯ ಮುಖಾಂತರ ಸಮಷ್ಟಿಯ ಹಿತಸಾಧನೆಯೂ ಅದರಲ್ಲಿ ಅಡಕಗೊಳ್ಳುತ್ತದೆ. *